

ಸಂಜೆವಾಣಿ
1982

ಕೇಂದ್ರ ಸಚಿವರಿಗೆ ಅಭಿನಂದನೆ: ಹೆಚ್ಚಿನ ಅನುದಾನಕ್ಕೆ ಬೇಡಿಕೆ

ದೇವನಹಳ್ಳಿ,ಜೂ12– ಸತತ 3ನೇ ಬಾರಿಗೆ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನರೇಂದ್ರ ಮೋದಿರವರ ಸಚಿವ ಸಂಪುಟಕ್ಕೆ ಕೇಂದ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಕೇಂದ್ರ ಸಚಿವ ಸಂಸದರಿಗೆ ರಾಜ್ಯಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು.ರಾಜ್ಯವನ್ನು ಇನ್ನಷ್ಟು ಅಭಿವೃದ್ಧಿ ಪಡಿಸುವಂತೆ ಹೆಚ್ ಎಂ ರವಿಕುಮಾರ್ ನೇತೃತ್ವದಲ್ಲಿ ಮನವಿ ಮಾಡಿದ್ರು, ದೆಹಲಿಯಲ್ಲಿ ಕೇಂದ್ರ ಸಚಿವರಾಗಿ ಅಧಿಕಾರವ ಸ್ವೀಕರಿಸಿದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಖಾತೆ ಸಚಿವರಾದ, ಹೆಚ್.ಡಿ.ಕುಮಾರಸ್ವಾಮಿ, ಹಣಕಾಸು ಸಚಿವೆಯಾದ ನಿರ್ಮಲ ಸೀತಾರಾಮನ್ ಆಹಾರ ಸರಬರಾಜು ನಾಗರೀಕ ಸಚಿವರಾದ, ಪ್ರಹ್ಲಾದ ಜೋಷಿ, ಜಲ ಮತ್ತುರೈಲ್ವೆ ಖಾತೆ ರಾಜ್ಯಸಚಿವರಾದ ವಿ.ಸೋಮಣ್ಣ, ಹಾಗೂ ಅತಿಸಣ್ಣ ಸಣ್ಣ ಮಾಧ್ಯಮ ಕೈಗಾರಿಕೆ ರಾಜ್ಯಸಚಿವೆಯಾಗಿರುವ ಶೋಭ ಕಾರಂದ್ಲಾಜೆ ಅವರನ್ನು ದೆಹಲಿಯಲ್ಲಿ ಸಚಿವ ಸಂಸದರನ್ನು ಭೇಟಿ ಮಾಡಿ ಅಭಿನಂದಿಸಿ ರಾಜ್ಯಕ್ಕೆ ಹೆಚ್ಚಿನ ಅನುದಾನ ತಂದು ಮತ್ತಷ್ಟು ಅಭಿವೃದ್ದಿ ಪಡಿಸಬೇಕು ಎಂದು ಮನವಿ ಮಾಡಿದರು.

ಇದೇವೇಳೆ ಬೆಂಗಳೂರುಗ್ರಾಮಾಂತರ ಜಿಲ್ಲೆಯಬಿಜೆಪಿಪ್ರಾಧಾನಕಾರ್ಯದರ್ಶಿ ಹೆಚ್.ಎಂ.ರವಿಕುಮಾರ್,ಕಾಳಿ ಮುನಿರಾಜು,ನವೀನ್ ಮುಂತಾದವರು ಹೂಗುಚ್ಚ ನೀಡುವ ಮೂಲಕ ಅಭಿನಂದನೆ ಸಲ್ಲಿಸಿದ್ರೂ.

ಕಲಬುರಗಿ ಜಿಲ್ಲೆಯಾದ್ಯಂತ ವರುಣನ ಆರ್ಭಟ

ಕಲಬುರಗಿ,ಜೂ.12–ಜಿಲ್ಲೆಯಾದ್ಯಂತ ವರುಣನಆರ್ಭಟಮುಂದುವರೆದಿದ್ದು, ಹಲವು ಕಡೆ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿವೆ. ಜಮೀನುಗಳಿಗೆ ನೀರು ನುಗ್ಗಿದೆ. ಕೆಲವು ಕಡೆ ಸೇತುವೆಗಳು ಮುಳುಗಿವೆ.

ಜಿಲ್ಲೆಯ ಆಳಂದ ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಭಾರಿ ಮಳೆಯಾಗಿದೆ. ಆಳಂದ ಪಟ್ಟಣದ ಹೊರವಲಯದಲ್ಲಿ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿವೆ.

ಹಳ್ಳಗಳು ತುಂಬಿದ ಕಾರಣ ಜಮೀನುಗಳಿಗೆನೀರುನುಗ್ಗಿದೆ.ಬೋಧನ ಗ್ರಾಮದಲ್ಲಿ ಕೆರೆ ಹಳ್ಳಗಳು ತುಂಬಿದ್ದು, ಬೋಧನ–ಕಮಲಾನಗರ ಮಧ್ಯೆ ಇರುವ ಸೇತುವೆ ಮುಳುಗಡೆಯಾಗಿದೆ. ಕಲಬುರಗಿ–ಬಸವಕಲ್ಯಾಣ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಬಂದ್ ಆಗಿದೆ.

ಕಳೆದ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿದೆ.

ಕಮಲಾಪುರತಾಲ್ಲೂಕಿನಅಂಬಲಗಾ ಗ್ರಾಮದಲ್ಲಿ ಗಂಡೋರಿ ನಾಲಾ, ಹಳ್ಳದ ನೀರು ಜಮೀನಿನೊಳಗೆ ನುಗ್ಗಿ ಬಿತ್ತನೆ ಮಾಡಿದ ಬೀಜ, ಗೊಬ್ಬರ, ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಗಿದೆ. ಮಳೆಯಿಂದ ಹಾನಿಯಾದ ರೈತರಿಗೆ ಪರಿಹಾರ ನೀಡಬೇಕು ಎಂದು ಕಾಂಗ್ರೆಸ್‌ನ ಕಲ್ಯಾಣ ಕರ್ನಾಟಕ ಕಿಸಾನ್ ಘಟಕದ ಅಧ್ಯಕ್ಷ ಶಿವಪುತ್ರಪ್ಪ ಬಿ.ಮೋಗಪ್ಪಗೋಳ ಒತ್ತಾಯಿಸಿದ್ದಾರೆ.

ತಂಬಾಕು ನಿಯಂತ್ರಣ ಘಟಕದಿಂದ 3400 ದಂಡ ಸಂಗ್ರಹ

ದೇವನಹಳ್ಳಿ.ಜೂ.12, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಹಳ್ಳಿಯಲ್ಲಿ ಕೋಟ್ಪಾ–2003 ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ವಿವಿಧ ಅಂಗಡಿಗಳ ಮೇಲೆ ಕೋಟ್ಪಾ ದಾಳಿಯನ್ನು ನಡೆಸಿದ್ದು ಸೆಕ್ಷನ್ 4ರ ಅಡಿಯಲ್ಲಿ 19 ಪ್ರಕರಣಗಳನ್ನು ದಾಖಲಿಸಿ 3400 ರೂಗಳ ದಂಡವನ್ನು ಸಂಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಘಟಕದ ಜಿಲ್ಲಾ ಸಲಹೆಗಾರರಾದ ಡಾ. ವಿದ್ಯಾರಾಣಿ ಪಿ.ಎಸ್, ದೊಡ್ಡ ತುಮಕೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಮಂಜುವಾಣಿ, ಪೊಲೀಸ್ ಇಲಾಖೆಯ ಎ.ಎಸ್.ಐ ವೆಂಕಟೇಶ್, ಕಾನ್ಸ್ಟೇಬಲ್ ವೆಂಕಟೇಶ್, ಶುಶೂಷ್ರಕಿ ಶರಣಮ್ಮ ಉಪಸ್ಥಿತರಿದ್ದರು.

ಅರಣ್ಯದ ರಕ್ಷಣೆಯತ್ತ ನಮ್ಮ ಗಮನ ಕಡಿಮೆ

ಕನಕಪುರ.ಜು.12–ಜನಸಾಂದ್ರತೆಯು ಹೆಚ್ಚಾದಂತೆ ಅರಣ್ಯದಭೂಮಿಯನ್ನು ಅತಿಕ್ರಮಿಸುತ್ತಿರುವುದರಿಂದ ಅರಣ್ಯದ ರಕ್ಷಣೆಯತ್ತ ನಮ್ಮ ಗಮನ ಕಡಿಮೆಯಾಗುತ್ತಿದೆ ಎಂದು 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೆಚ್.ಎನ್. ಕುಮಾರ್ ಆತಂಕ ವ್ಯಕ್ತಪಡಿಸಿದ್ದಾರೆ.

ಕನಕಪುರ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಅರಣ್ಯ ಇಲಾಖೆಯ ಸಹಯೋಗದೊಂದಿ ನಗರದಲ್ಲಿ ನೂತನವಾಗಿನಿರ್ಮಾಣಗೊಳ್ಳುತ್ತಿರುವ ನ್ಯಾಯಾಲಯದಕಟ್ಟಡದಆವರಣದಲ್ಲಿ ಗಿಡನೆಟ್ಟುಅವರು ಮಾತನಾಡಿದರು.

ಅರಣ್ಯ ಸಂರಕ್ಷಣೆಯತ್ತ ಎಲ್ಲರೂ ಸಹ ಗಮನ ನೀಡಬೇಕಾಗಿದೆ. ವಿಶ್ವಪರಿಸರ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗದೆ ವರ್ಷದ ಎಲ್ಲಾ ದಿನಗಳಲ್ಲಿ ನಾವು ಗಿಡಗಳನ್ನು ನೆಟ್ಟು ಬೆಳೆಸುವತ್ತ ಗಮನ ನೀಡುವಂತೆ ಕರೆನೀಡಿದರು.

ಮನುಷ್ಯನಿಗೆ ಪ್ರತಿದಿನ ನಾಲ್ಕು ಸಿಲಿಂಡರ್ ಆಮ್ಲಜನಕ ಬೇಕಾಗಿದೆ. ಪ್ರಕೃತಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಉಚಿತವಾಗಿ ಅಮ್ಲಜನಕವನ್ನು ನೀಡುತ್ತಿದೆ ಮನುಷ್ಯನ ಜೀವನಕ್ಕೆ ಗಿಡಗಳಿಂದ ಬರುತ್ತಿರುವ ಈ ಆಮ್ಲಜನಕ ಹೆಚ್ಚು ಸಿಗಬೇಕೆಂದರೆ

ಹೆಚ್ಚು ಹೆಚ್ಚು ಗಿಡಗಳನ್ನು ನೆಟ್ಟು ಮುಂದಿನ ನಮ್ಮ ಪೀಳಿಗೆಗೆ ಒಳ್ಳೆಯ ಪರಿಸರವನ್ನು ಬಳುವಳಿಯಾಗಿ ನೀಡಬೇಕಾಗಿದೆ ಎಂದು ಕರೆನೀಡಿದರು. ವಕೀಲರ ಸಂಘದ ಅಧ್ಯಕ್ಷರಾದ ಎ.ಸಿ. ಚನ್ನೇಗೌಡ ಮಾತನಾಡಿ ಜನಗಳ ಅತಿಯಾದ ಆಸೆಯಿಂದ ಪರಿಸರದಲ್ಲಿ ಇರುವ ಮರಗಳನ್ನು ಕಡಿಯುತಿದ್ದು ಇದರಿಂದ ಪರಿಸರದಲ್ಲಿ ಆಮ್ಲಜನಕದ ಕೊರತೆ ಏರ್ಪಟ್ಟಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಪ್ರತಿಯೊಬ್ಬ ಮನುಷ್ಯನು ಕನಿಷ್ಠ 10 ಗಿಡಗಳನ್ನು ನೆಟ್ಟು ಬೆಳೆಸುವಂತೆ ಕರೆನೀಡಿದರು. ಈ ನಿಟ್ಟಿನಲ್ಲಿ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಮೂಲಕ ಪ್ರೇರೇಪಣೆ ನೀಡಿದಂತಾಗುತ್ತದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗೆಯೇ ಪರಿಸರದ ಮೇಲೆ ಹೆಚ್ಚುಪರಿಣಾಮಬೀರುತ್ತಿರುವಪ್ಲಾಸ್ಟಿಕ್ ಬಳಕೆಯನ್ನು ಹಂತಹಂತವಾಗಿ ತಡೆಗಟ್ಟುವಲ್ಲಿ ನಾವು ನೀವೆಲ್ಲರೂ ಪ್ರಯತ್ನಿಸಬೇಕೆಂದು ತಿಳಿಸಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವಿ. ಗಣೇಶ್‌ರವರು ಮಾತನಾಡಿ ಭಾರತ ದೇಶದಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮದ ಬಗ್ಗೆ 2500 ವರ್ಷಗಳ ಇತಿಹಾಸವನ್ನು ನಾವು ನೋಡಬಹುದಾಗಿದೆ ಅಶೋಕ ಮಹಾರಾಜ ಕಾಲದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಸಾಲು ಗಿಡಗಳನ್ನು ನೆಟ್ಟು ಬೆಳೆಸುವ ಒಂದು ಪ್ರತ್ಯೇಕ ಇಲಾಖೆಯೇ ಇತ್ತು ಎಂಬುವುದರ ಬಗ್ಗೆ ಮಾಹಿತಿ ಇದೆ. ಈ ಕಾರ್ಯಕ್ರಮದಲ್ಲಿ ಕನಕಪುರ ಜೆಎಂಎಫ್ ಸಿ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಕೆ.ಎ. ನಾಗೇಶ್, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸುರೇಶ್ ಆ ಸವದಿ, 1ನೇ ಅಪರ ಸಿವಿಲ್ ನ್ಯಾಯಾದೀಶರಾದ ಶ್ರೀಮತಿ ರಾಧ ಎಸ್. ಸರ್ಕಾರಿ ಅಭಿಯೋಜಕರಾದ ಗಂಗಾಧರ್, ವಕೀಲರ ಸಂಘದ ಕಾರ್ಯದರ್ಶಿ ರಾಜಣ್ಣ, ಖಜಾಂಚಿ ಸಾಗರ್, ವಲಯ ಅರಣ್ಯಾಧಿಕಾರಿ ದಾಳೇಶ್ ಎ.ಎಲ್. ಉಪ ವಲಯ ಅರಣಾಧಿಕಾರಿ ಶಿವಕುಮಾರ್, ಮಲ್ಲಿಕಾರ್ಜುನ್, ಅರಣ್ಯರಕ್ಷಕರಾದ ಮಂಜುನಾಥ್, ರಾಜಶೇಖರ್, ಸೇರಿದಂತೆ ಎಲ್ಲಾ ವಕೀಲರು ಪಾಲ್ಗೊಂಡಿದ್ದರು.

ವ್ಯಕ್ತಿ ಮೇಲೆ ದುಷ್ಕರ್ಮಿಗಳಿಂದ ಹಲ್ಲೆ

ತುಮಕೂರು,ಜೂ.12–ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯೊಬ್ಬರ ಮೇಲೆ ದ್ವಿಚಕ್ರ ವಾಹನದಲ್ಲಿ ಬಂದ ಮೂವರು ದುಷ್ಕರ್ಮಿಗಳು ಲಾಂಗ್‌ನಿಂದ ಹಲ್ಲೆ ನಡೆಸಿರುವ ಘಟನೆ ಇಲ್ಲಿನ ನಗರಠಾಣೆ ಸರಹದ್ದಿನಲ್ಲಿ ನಡೆದಿದೆ.

ರಮೇಶ್ ಎಂಬುವರೇ ಹಲ್ಲೆಗೊಳಗಾಗಿರುವ ವ್ಯಕ್ತಿ. ನಗರದ ಹೊರವಲಯದ ಅಂತರಸನಹಳ್ಳಿ ಸಮೀಪ ಇರುವ ಪೆಟ್ರೋಲ್ ಬಂಕ್ ಸಮೀಪ ರಾತ್ರಿ ಮನೆಯಿಂದ ಅಂತರಸನಹಳ್ಳಿ ಕಡೆಗೆ ನಡೆದುಕೊಂಡು ಹೋಗುತ್ತಿದ್ದ ರಮೇಶ್ ಅವರನ್ನು ಡಿಯೋ ಬೈಕ್‌ನಲ್ಲಿ ಬಂದ ಮೂವರು ದುಷ್ಕರ್ಮಿಗಳು ಅಡ್ಡಗಟ್ಟಿ ಬಾಕು, ಲಾಂಗ್ ತೋರಿಸಿ ಬೆದರಿಸಿದ್ದಾರೆ.

ರಮೇಶ್ ಅವರಿಗೆ ಹಣ ಹಾಗೂ ಮೊಬೈಲ್ ನೀಡುವಂತೆ ಧಮ್ಕಿ ಹಾಕಿದ್ದು, ಹಣ, ಮೊಬೈಲ್ ನೀಡದೇ ಇದ್ದರಿಂದ ಕುಪಿತಗೊಂಡ ದುರ್ಷರ್ಮಿಗಳು ಲಾಂಗ್ ಬೀಸಿದ್ದು, ಕೈಯಲ್ಲಿ ಅಡ್ಡ ನೀಡಿದ್ದರಿಂದ ಕೈಯಲ್ಲಿನ ನರಗಳು ಕಟ್ ಆಗಿವೆ ಎನ್ನಲಾಗಿದೆ.

ದುಷ್ಕರ್ಮಿಗಳಿಂದ ಹಲ್ಲೆಗೆ ಒಳಗಾಗಿ ತೀವ್ರಗಾಯಗೊಂಡಿರುವ ರಮೇಶ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಸಂಬಂಧ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬೆಂಗಳೂರು
ಬುಧವಾರ
12 ಜೂನ್ 2024
28°
/ 21 °C

ಗುರುವಾರ	27°/21°
ಶುಕ್ರವಾರ	27°/21°

ಮೂವರು ಡಿಸಿಎಂ ನೇಮಕಕ್ಕೆ ಸಚಿವ ರಾಜಣ್ಣ ಆಗ್ರಹ

ತುಮಕೂರು, ಜೂ. 12– ಇದುವರೆಗೆ ತಣ್ಣಗಾಗಿದ್ದ ಮೂವರು ಉಪ ಮುಖ್ಯಮಂತ್ರಿಗಳ ನೇಮಕದ ವಿಚಾರ, ಲೋಕಸಭೆ ಚುನಾವಣೆ ನಂತರ ಮತ್ತೆ ಮುನ್ನೆಲೆಗೆ ಬಂದಿದ್ದು, ಮೂವರು ಡಿಸಿಎಂ ನೇಮಕ ಮಾಡಬೇಕು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತೊಮ್ಮೆ ವರಿಷ್ಠರನ್ನು ಆಗ್ರಹಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಬರಲಿದೆ. ಮೂವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿದರೆ ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ಹೇಳಿದರು.

ಲೋಕಸಭೆ ಚುನಾವಣೆ ಮುಗಿಯುವವರೆಗೂ ಉಪಮುಖ್ಯಮಂತ್ರಿ ವಿಚಾರ ಮಾತನಾಡದಂತೆ ಸುಮ್ಮನಿರುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರು. ಹಾಗಾಗಿ ಸುಮ್ಮನಿದ್ದೆ. ಖರ್ಗೆ ಅವರನ್ನು ಖುದ್ದಾಗಿ ಭೇಟಿ ಮಾಡಿ ಈ ವಿಚಾರ ಚರ್ಚಿಸಲಾಗುವುದು ಎಂದರು.

ಮಲ್ಲಿಕಾರ್ಜುನ ಖರ್ಗೆ ರಾಜ್ಯ ರಾಜಕಾರಣಕ್ಕೆ ಬಂದು, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಆಗಲಿದ್ದಾರೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಆಗುವುದಿದ್ದರೆ ಬಹಳ ಹಿಂದೆಯೇ ಆಗಬೇಕಿತ್ತು.

ಈಗ ಅಂತಹ ಸಾಧ್ಯತೆಗಳಿಲ್ಲ. ಡಿ.ಕೆ.ಶಿವಕುಮಾರ್ ಸಹ ಮುಖ್ಯಮಂತ್ರಿಯಾಗಲು ಕುರ್ಚಿ ಖಾಲಿ ಇಲ್ಲ. ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ಹೇಳಿದರು.

ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದಿಂದ ಬದಲಾವಣೆ ಮಾಡಿದರೆ ಅಭ್ಯಂತರವಿಲ್ಲ. ಉಸ್ತುವಾರಿ ಮಾಡುವಂತೆ ನಾನು ಕೇಳಿರಲಿಲ್ಲ. ಬೇಕಿದ್ದರೆ ಬದಲಾವಣೆ ಮಾಡಿಕೊಳ್ಳಲಿ ಎಂದರು.

ಬೆಂಗಳೂರು ನಗರ ಜಿಲ್ಲಾ ಪ್ರವಾಸದಲ್ಲಿರುವ ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ. ಎಚ್.ಕೃಷ್ಣ ಅವರು ಇಂದು ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕದಲ್ಲಿರುವ ಡಾ. ಬಿ.ಆರ್ ಅಂಬೇಡ್ಕರ್ ಸರ್ಕಾರಿ ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳ ಕುರಿತು ಪರಿಶೀಲನೆ ನಡೆಸಿದರು. ಇದೇ ಸಂದರ್ಭದಲ್ಲಿ ಆಯೋಗದ ಸದಸ್ಯರುಗಳಾದ ಲಿಂಗರಾಜ ಕೋಟೆ, ಸುಮಂತ್ ರಾವ್, ಮಾರುತಿ ಎಂ. ದೊಡ್ಡಲಿಂಗಣ್ಣವರ, ಎ.ರೋಹಿಣಿ ಪ್ರಿಯಾ, ಕೆ.ಎಸ್ ವಿಜಯಲಕ್ಷ್ಮಿ, ಬೆಂಗಳೂರು ನಗರ ಜಿಲ್ಲೆ ಅಹಾರ ಇಲಾಖೆಯ ಉಪ ನಿರ್ದೇಶಕರಾದ ಪ್ರೀತಿ ಚಂದ್ರಶೇಖರ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ

ಕೆಜಿಎಫ್,ಜೂ.12:ನರೇಂದ್ರಮೋಧಿ ರವರು 3 ನೇ ಬಾರಿ ರಾಷ್ಟ್ರದ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸದ ಹಿನ್ನಲೆಯಲ್ಲಿ ನಗರದ ಗಾಂಧಿ ವೃತ್ತ ಹಾಗೂ ವಾಜಪೇಯಿ ವೃತ್ತದಲ್ಲಿ ಬಿಜೆಪಿ ಜೆಡಿಎಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಸುರೇಶ್‌ಕುಮಾರ ಕಳೆದ 10 ವರ್ಷಗಳಿಂದ ಸತತವಾಗಿ ರಾಷ್ಟ್ರವನ್ನು ವಿಶ್ವದಲ್ಲೇ ಭಲಿಷ್ಠ ರಾಷ್ಟ್ರವನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿರುವ ಪ್ರಧಾನಮಂತ್ರಿ ನರೇಂದ್ರಮೋದಿ 3 ನೇ ಬಾರಿ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವುದು ನಾಡಿನ ಜನರಿಗೆ ಸಂತೋಷದಾಯಕ ವಿಷಯವಾಗಿದ್ದು ಮುಂದಿನ ದಿನಗಳಲ್ಲಿ ಎನ್‌ಡಿಎ ಸರ್ಕಾರವನ್ನು ಇನ್ನಷ್ಟು ಬಲಿಷ್ಟವಾಗಿ ಮಾಡುವ ಮೂಲಕ ದೇಶವನ್ನು ಯಶಸ್ವಿಯಾಗಿ ಮುನ್ನೆಡೆಸಲಿದ್ದರೆ ಎಂದು ಹೇಳಿದರು.

ಕೋಲಾರ ಜಿಲ್ಲೆಯಲ್ಲೂ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಲ್ಲೇಶಬಾಬು ವಿಜಯಸಾಧಿಸಿದ್ದಾರೆ ಆದರೆ ಕೆಜಿಎಫ್ ನಗರದ ಕೆಲವು ವಾರ್ಡ್‌ಗಳಲ್ಲಿ ಕಡಿಮೆ ಮತಗಳು ಲಭಿಸಿದ್ದು ಮುಂದಿನ ದಿನಗಳಲ್ಲಿ ಬರಲಿರುವ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ನಗರಸಭೆ ಚುನಾವಣೆಗಳಲ್ಲಿ ಪಕ್ಷವನ್ನು ಬಲಿಷ್ಠವಾಗಿಸಲು ಶ್ರಮಿಸುವುದಾಗಿ ಹೇಳಿದರು.

ಮಾಜಿ ನಗರ ಬಿಜೆಪಿ ಅಧ್ಯಕ್ಷ ವೆಂಕಟೇಶ್ ಮಾತನಾಡಿ ದೇಶದ ಜನರ ನಂಬಿಕೆ ಉಳಿಸಿಕೊಂಡಿರುವ ನರೇಂದ್ರಮೋಧಿ ರವರು ದೇಶದ ಪ್ರಧಾನ ಮಂತ್ರಿಯಾಗಿ 3 ನೇ ಬಾರಿ ಅಧಿಕಾರ ಸ್ವೀಕರಿಸಿರುವುದು ನಮ್ಮೆಲ್ಲರಿಗೂ ಸಂತಸದಾಯಕವಾಗಿದೆ ಕೆಜಿಎಫ್ ನಗರ ಪ್ರದೇಶದಲ್ಲಿ ಮೈತ್ರಿ ಅಭ್ಯರ್ಥಿಗೆ ಕಡಿಮೆ ಮತಲಭಿಸಿರುವುದು ಏಕೆ ಎಂದು ಚರ್ಚೆ ನಡೆಸುವ ಮೂಲಕ ಸರಿಪಡಿಸಿ ಪಕ್ಷಸಂಘಟನೆ ಮಾಡಲಾಗುವುದು ಎಂದರು. ಈವೇಳೆ ಕೋಲಾರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ವಿಜಿಕುಮಾರ, ಜೆಡಿಎಸ್ ಮುಖಂಡ ದಯಾನಂದ, ಬಾಬು, ಶೇಖರ್, ನೈನಾರವಿಕುಮಾರ, ಕಾರ್ಯದರ್ಶಿ ಪಾಂಡ್ಯನ್, ರವಿಕುಮಾರ, ಮೇಘನಾಥನ್, ಆರ್ಮಗಂ ಹಾಗೂ ರಮೇಶ್ ,ದೇವೇಂದ್ರನ್ ಹಾಗೂ ಇತರರು ಹಾಜರಿದ್ದರು.

ದೊಡ್ಡಮೋರಿಗೆ 60 ವರ್ಷಗಳ ದೊರೆತ ಮೋಕ್ಷ

ಸಂಜೆವಾಣಿ ಪ್ರತಿನಿಧಿ

ಚಿಕ್ಕಬಳ್ಳಾಪುರ,ಜೂ.12– ನಗರ ವ್ಯಾಪ್ತಿಯ 31 ವಾರ್ಡ್‌ಗಳ ಪೈಕಿ 19ನೇ ವಾರ್ಡ್‌ಗೆ ಸಂಬಂಧಿಸಿದಂತೆ ಅತ್ಯಂತ ಜನನಿ ಬಿಡ ಬಜಾರ್ ರಸ್ತೆಯಲ್ಲಿ ಅತ್ಯಂತ ದೊಡ್ಡದಾಗಿ ಕಾಣಿಸುತ್ತಿರುವ ಮೋರಿ ಕಾಮಗಾರಿ 60 ವರ್ಷಗಳ ನಂತರ ಇದೇ ಮೊದಲ ಬಾರಿಗೆ ಆರಂಭಗೊಂಡಿದೆ. ಈ ದೊಡ್ಡ ಪ್ರಮಾಣದ ಮೋರಿ ಇಲ್ಲಿ ಇದೆ ಎಂದೇ ಈ ತಲೆಮಾರಿನವರಿಗೆ ಗೊತ್ತಿಲ್ಲ.

ಚಿಕ್ಕಬಳ್ಳಾಪುರದ ಬಜಾರ್ ರಸ್ತೆಯ ಶ್ರೀ ಕೋದಂಡರಾಮಸ್ವಾಮಿ ದೇವಾಲಯದ ಎದುರು ರಸ್ತೆಯಲ್ಲಿ ಕೆಲವು ದಿನಗಳ ಹಿಂದೆ ನೀರು ಸರಾಗವಾಗಿ ಹರಿಯಲು ಮೋರಿ ಒಂದು ಇತ್ತು ಈ ಮೋರಿ ಮಳೆ ಬಂದಾಗ ನೀರು ತುಂಬಿಕೊಂಡು ರಸ್ತೆಯ ಮೇಲೆ ಹರಿದು ಮಲಿನ ವಾತಾವರಣ ಉಂಟುಮಾಡುತ್ತಿತ್ತು.

ಮೋರಿ ಕಟ್ಟಿಕೊಂಡಿರಬಹುದು ಎಂದು 19ನೇ ವಾರ್ಡ್ ನಗರಸಭಾ ಸದಸ್ಯ ಮಹಾಕಾಳಿ ರಮೇಶ್ ಬಾಬುರವರಿಗೆ ದೂರು ಬಂದ ಹಿನ್ನೆಲೆಯಲ್ಲಿ ಚರಂಡಿಯಲ್ಲಿ ಕಟ್ಟಿಕೊಂಡಿರುವ ಕಸ ಕಡ್ಡಿಗಳನ್ನು ತೆರೆಯಲು ಜೆಸಿಬಿ ಬಳಸಿದಾಗ ಕಂಡುಬಂದಿದೆ.

ಅಚ್ಚರಿ ಎಂಬಂತೆ ಈ ಮೋರಿಯಲ್ಲಿ ಹಳೆ ಹಾಸಿಗೆಗಳು ತ್ಯಾಜ್ಯಗಳನ್ನು ಕಟ್ಟಿದ ಬಟ್ಟೆಗಳು ಇಲ್ಲಿ ಇತ್ತು ಇವುಗಳೆಲ್ಲವನ್ನು ತೆರವುಗೊಳಿಸುವ ಕಾರ್ಯ ನಿರಂತರವಾಗಿ ದಿನಗಳ ಕಾಲ ನಡೆಯಿತು.

ಬಹುಶಹ ಈ ದೊಡ್ಡ ಮೋರಿ ಇಡೀ ಚಿಕ್ಕಬಳ್ಳಾಪುರದಲ್ಲಿ ಅತ್ಯಂತ ಅಗಲವಾದ ಮರಿ ಆಗಿದ್ದು ಆಗಿನ ಕಾಲದಲ್ಲಿ ಸಿಮೆಂಟ್ ಬಳಸದೆ ಕಲ್ಲುಗಳ ಜೋಡಣೆಯಿಂದ ಮಾತ್ರ ಚರಂಡಿಯನ್ನು ಕಟ್ಟಿದ್ದು ಈಗ ಕಂಡು ಬಂದಿದೆ.

ಚಿಕ್ಕಬಳ್ಳಾಪುರ ನಗರದಲ್ಲಿ ಈ ಭಾಗದಲ್ಲಿಯೇ ಈ ಸಮಸ್ಯೆ ಇಲ್ಲ ನಗರದ ಅನೇಕ ಬಡಾವಣೆಗಳಲ್ಲಿ ಮಳೆ ಬಂದಾಗ ನೀರು ಚರಂಡಿಗಳಲ್ಲಿ ಸರಗವಾಗಿ ಹರಿಯದ ರಸ್ತೆ ಮೇಲೆ ಬಂದು ಸಂಚಾರಕ್ಕೆ ಅಡಚಣೆ ಉಂಟುಮಾಡುತ್ತದೆ ಪಾದ ಚಾರಿಗಳಿಗೆ ಹೆಸರಿನ ಅಭಿಷೇಕ ಉಂಟು ಮಾಡುತ್ತಿದೆ ನಗರಸಭೆ ಪೌರಾಯುಕ್ತರು ಇದನ್ನು ಕಂಬ ಗಂಭೀರವಾಗಿ ಗಣನೆಗೆ ತೆಗೆದುಕೊಂಡು ಎಲ್ಲಾ ಬಡಾವಣೆಗಳಲ್ಲಿಯೂ ಈ ರೀತಿ ಹಳೆ ಮರಿಗಳು ಇದ್ದರೆ ಅವುಗಳನ್ನು ತೆರವುಗೊಳಿಸಿ ನಗರದ ಜನತೆಗೆ ಉತ್ತಮ ಮಲ್ಲಿನ ರಹಿತ ವಾತಾವರಣ ಉಂಟಿ ಮಾಡಿಕೊಡಬೇಕು ಎಂಬುದೇ ಈ ವರದಿಯ ಸದುದ್ದೇಶವಾಗಿದೆ.

ನಾಳೆ ವೀರಶೈವ ಸಮುದಾಯದಿಂದ ಪ್ರತಿಭಟನೆ

ದಾವಣಗೆರೆ, ಜೂ. 12– ದಾವಣಗೆರೆ ಜಿಲ್ಲಾ ವೀರಶೈವರ ಸಮಾಜದಿಂದ ರೇಣುಕಾಸ್ವಾಮಿಯವರ ಹತ್ಯೆಯನ್ನು ಮಾಡಿರುವ ಎಲ್ಲಾ ಅಪರಾಧಿಗಳನ್ನು ಕೂಡಲೇ ಬಂಧಿಸಿ ಹಾಗೂ ಅವರ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ನಾಳೆ ಸಂಜೆ 4.30 ಗಂಟೆಗೆ ನಗರದ ಮಹಾನಗರ ಪಾಲಿಕೆಯ ಗಾಂಧಿ ಪ್ರತಿಮೆಯ ಮುಂದೆ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ. ನಂತರ ಪ್ರತಿಭಟನೆಯ ಮೂಲಕ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಗುವುದು.

ಆದ್ದರಿಂದ ವೀರಶೈವ ಸಮಾಜದ ಎಲ್ಲಾ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ದಾವಣಗೆರೆ ಜಿಲ್ಲಾ ವೀರಶೈವ ಸಮಾಜದ ಮುಖಂಡರು ತಿಳಿಸಿದ್ದಾರೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

CHANGE OF NAME
I, **Musthaq Ahmed,** S/o Aliyar Umar Basha, R/at # 443, 6th Cross, 2nd Main Road, Vinobha Nagar, K.G. Halli, Bangalore-560045 have Changed My Name to **Musthaq Ahmed Aliyar** vide Affidavit dated 10.06.2024. Sworn before notary **V. Rajashekhara,** Bangalore.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾವೇರಿ ನೀರಾವರಿ ನಿಗಮ ನಿಯಮಿತ, ರೂಪರೇಖಾ ಮತ್ತು ತನಿಖಾ ವಿಭಾಗ, ಬನ್ನೂರು–571101.
ಪೋ: 08227–275653, ಫ್ಯಾಕ್ಸ್: 08227–275653
ಇ–ಮೇಲ್: eedidbannur@gmail.com
ಟೆಂಡರ್ ಪ್ರಕಟಣೆ ಸಂಖ್ಯೆ : 02/2024–25: ದಿನಾಂಕ:07.06.2024
(**Karnataka Public Procurement Portal** ಮೂಲಕ ಮಾತ್ರ)
ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರುಗಳಿಂದ ನೀರು ನಿರ್ವಹಣೆ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಅನ್ನು ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 02/2024–25, ದಿನಾಂಕ:07.06.2024 ರಲ್ಲಿ ಒಟ್ಟು 6 ಕಾಮಗಾರಿಗಳಿಗೆ (ಅಂದಾಜು ಮೊತ್ತ ಕನಿಷ್ಠ ರೂ.41.00 ಲಕ್ಷಗಳು ಮತ್ತು ಗರಿಷ್ಠ ರೂ.49.80 ಲಕ್ಷಗಳು) ಕೆ.ಡಬ್ಲ್ಯೂ–2 ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ತೆರೆಯುವ ದಿನಾಂಕ ಹಾಗೂ ಇತರೆ ವಿವರಗಳನ್ನು Karnataka Public Procurement Portal ನಲ್ಲಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ/– ಮಾಡಿರುವ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.
DIPR/DDMYS-53/KSMCA-44/2024-25 **ಸಹಿ/– ಕಾರ್ಯಪಾಲಕ ಅಭಿಯಂತರರು**

B&B TRIPLEWALL CONTAINERS LIMITED
(L21015KA2011PLC060106)
Regd. ಕಛೇರಿ: ಸೈ. ಸಂ. 263/2/3, ಮರಸೂರು ಮಡಿವಾಳ, ಕಸಬಾ ಹೋಬಳಿ ಆನೇಕಲ್ ತಾಲೂಕು,
ಬೆಂಗಳೂರು, ಕರ್ನಾಟಕ, 562106
Website : https://boxandboard.in/, E mail: cs@boxandboard.in

ಕಂಪನಿಗಳ ಕಾಯಿದೆ, 2013 ("ದಿ ಆಕ್ಟ್") ನ ನಿಯಮಗಳು 20 ಮತ್ತು 22 ರ ಜೊತೆಗೆ ಸೆಕ್ಷನ್ 110 ಮತ್ತು ಇತರ ಸಂಬಂಧಿತ ನಿಬಂಧನೆಗಳ ಬಂಧನೆಗಳಿಗೆ ಅನುಸಾರವಾಗಿ ಮತ್ತು ಅನುಸಾರವಾಗಿ ಕಂಪನಿಯ ಸದಸ್ಯರಿಗೆ ಈಮೂಲಕ ತಿಳಿಸಲಾಗಿದೆ. ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು"), ನಿಬಂಧನೆ 44, ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸೆಂಜ್ ಬೋರ್ಡ್ ಆಫ್ ಇಂಡಿಯಾದ ಇತರ ಅನ್ವಯವಾಗುವ ನಿಯಮಗಳು (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು,2015 ("ಸೆಬಿ **LODR** ನಿಯಮಗಳು), ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು ಅಥವಾ ಮರು–ಅನುಷ್ಠಾನ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಸಾಮಾನ್ಯ ಸುತ್ತೋಲೆಗಳು, ಕಂಪನಿಯು ಅಂಚೆ ಮತಪತ್ರದ ಮೂಲಕ ಕಂಪನಿಯ ಷೇರುದಾರರ ಅನುಮೋದನೆಯನ್ನು ಕೋರುತ್ತಿದೆ. ಈ ಅನುಮೋದನೆ ಪ್ರಕ್ರಿಯೆಯನ್ನು 11.06.2024 ರ ಅಂಚೆ ಮತಪತ್ರದಲ್ಲಿ ವಿವರಿಸಿರುವ ನಿರ್ಣಯಗಳಿಗೆ ಎಲೆಕ್ಟ್ರಾನಿಕ್ ವಿಧಾನಗಳ ("ರಿಮೋಟ್ ಇ–ವೋಟಿಂಗ್") ಮೂಲಕ ಮಾತ್ರ ನಡೆಸಲಾಗುತ್ತದೆ.ಅನ್ವಯವಾಗುವ **MCA** ಸುತ್ತೋಲೆಗಳಿಗೆ ಅನುಸಾರವಾಗಿ, ವಿವರಣಾತ್ಮಕ ಹೇಳಿಕೆ ಮತ್ತು ರಿಮೋಟ್ ಇ–ವೋಟಿಂಗ್ ಸೂಚನೆಗಳೊಂದಿಗೆ ಅಂಚೆ ಮತಪತ್ರ ಸೂಚನೆಯು ವಿದ್ಯುನ್ಮಾನವಾಗಿ ರವಾನೆಯಾಗುತ್ತದೆ, ಅವರ ಹೆಸರುಗಳನ್ನು ಸದಸ್ಯರ ನೋಂದಣಿ / ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಪಟ್ಟಿ ಮಾಡಲಾಗಿದೆ. ದಿನಾಂಕ, 14.06.2024. ಕಂಪನಿ/ಠೇವಣಿ ಭಾಗವಹಿಸುವವರೊಂದಿಗೆ ("DP ಗಳು") ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿದವರಿಗೆ ಈ ಸಂವಹನವನ್ನು ಕಳುಹಿಸಲಾಗಿದೆ. ಪರಿಣಾಮವಾಗಿ, ಪೋಸ್ಟಲ್ ಬ್ಯಾಲೆಟ್ ನೋಟೀಸ್ ಮತ್ತು ಸಂಬಂಧಿತ ದಾಖಲೆಗಳ ಭೌತಿಕ ಪ್ರತಿಗಳನ್ನು ಷೇರುದಾರರಿಗೆ ಕಳುಹಿಸಲಾಗುವುದಿಲ್ಲ ಮತ್ತು ರಿಮೋಟ್ ಇ–ವೋಟಿಂಗ್ ಸಿಸ್ಟಮ್ ಮೂಲಕ ಮಾತ್ರ ತಮ್ಮ ಒಪ್ಪಿಗೆ ಅಥವಾ ಅಸಮ್ಮತಿಯನ್ನು ವ್ಯಕ್ತಪಡಿಸಲು ಷೇರುದಾರರನ್ನು ವಿನಂತಿಸಲಾಗಿದೆ. ಇದಲ್ಲದೆ, ಪೋಸ್ಟಲ್ ಬ್ಯಾಲೆಟ್ ನೋಟೀಸ್ ಕಂಪನಿಯ ವೆಬ್‌ಸೈಟ್‌ನಲ್ಲಿ **https://boxandboard.in**/ ನಲ್ಲಿ ಲಭ್ಯವಿದೆ ಮತ್ತು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಅಂದರೆ **NSE** ಮತ್ತು **BSE** ನಲ್ಲಿ ಲಭ್ಯವಿದೆ. ರಿಮೋಟ್ ಇ–ವೋಟಿಂಗ್ ಅನ್ನು ಸುಲಭಗೊಳಿಸಲು, ಕಂಪನಿಯು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ **(CDSL)** ಸೇವೆಗಳನ್ನು ತೊಡಗಿಸಿಕೊಂಡಿದೆ. ರಿಮೋಟ್ ಇ–ವೋಟಿಂಗ್‌ಗೆ ವಿವರವಾದ ಸೂಚನೆಗಳನ್ನು ಪೋಸ್ಟಲ್ ಬ್ಯಾಲೆಟ್ ನೋಟಿಸ್‌ನಲ್ಲಿ ನೀಡಲಾಗಿದೆ. ರಿಮೋಟ್ ಇ–ವೋಟಿಂಗ್ ಅವಧಿಯು ಬುಧವಾರ, 19.06.2024 ರಂದು ಬೆಳಿಗ್ಗೆ 11:00 ಗಂಟೆಗೆ ಐಎಸ್‌ಟಿ ಪ್ರಾರಂಭವಾಗುತ್ತದೆ ಮತ್ತು ಶುಕ್ರವಾರ, 19.07.2024 ರಂದು ಸಂಜೆ 05:00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. ಐಎಸ್‌ಟಿ ಅದರ ನಂತರ ಮತದಾನಕ್ಕಾಗಿ ರಿಮೋಟ್ ಇ– ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಇ–ವೋಟಿಂಗ್ ಸದಸ್ಯರಿಂದ ಒಮ್ಮೆ ಮತವನ್ನು ಚಲಾಯಿಸಿದರೆ, ನಂತರ ಅದನ್ನು ಬದಲಾಯಿಸಲಾಗುವುದಿಲ್ಲ. ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂತೆ ಕಂಪನಿಯ ಒಟ್ಟು ಪಾವತಿಸಿದ ಷೇರು ಬಂಡವಾಳದಲ್ಲಿ ಅವರ ಷೇರುಗಳ ಪಾವತಿಸಿದ ಮೌಲ್ಯಕ್ಕೆ ಅನುಪಾತದಲ್ಲಿರುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್ / ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಹೆಸರುಗಳನ್ನು ದಾಖಲಿಸಿದವರು ಮಾತ್ರ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಒಎಂ ಸುತ್ತೋಲೆಗಳಿಗೆ ಅನುಸಾರವಾಗಿ, ತಮ್ಮ ಇಮೇಲ್ ವಿಳಾಸಗಳನ್ನು ಇನ್ನೂ ನೋಂದಾಯಿಸದ ಮತ್ತು ಪರಿಣಾಮವಾಗಿ ಅಂಚೆ ಮತಪತ್ರ ಸೂಚನೆಯನ್ನು ಸ್ವೀಕರಿಸಲು ಸಾಧ್ಯವಾಗದ ಸದಸ್ಯರು ತಮ್ಮ ಇಮೇಲ್ **("RTA"), Purva Sharegistry (India) Pvt Ltd** ನಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಬಹುದು. ಇಮೇಲ್ ವಿಳಾಸಗಳ ಶಾಶ್ವತ ನೋಂದಣಿಗಾಗಿ, ಷೇರುದಾರರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿಯೊಂದಿಗೆ ಸಂಬಂಧಿತ **DP** ಗಳ ಮೂಲಕ ಮತ್ತು ಕಂಪನಿಯ **RTA** ಯೊಂದಿಗೆ ಸೂಕ್ತ ವಿಧಾನವನ್ನು ಅನುಸರಿಸಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಪೋಸ್ಟಲ್ ಬ್ಯಾಲೆಟ್ ನೋಟಿಸ್‌ನಲ್ಲಿ ಒದಗಿಸಲಾದ ಸೂಚನೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸುವಂತೆ ನಾವು ಸದಸ್ಯರನ್ನು ಕೋರುತ್ತೇವೆ. ಯಾವುದೇ ಪ್ರಶ್ನೆಗಳಿಗೆ, ದಯವಿಟ್ಟು ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು **(FAQs)** ಮತ್ತು ಇ–ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ನೋಡಿ ಅಥವಾ ಕಂಪನಿಯ **RTA, Purva Sharegistry (India) Pvt Ltd & support@purvashare.com** ನಲ್ಲಿ ವಿನಂತಿಯ ಮೇರೆಗೆ, ಅಂಚೆ ಮತಪತ್ರದಲ್ಲಿ ಉಲ್ಲೇಖಿಸಲಾದ ಸಂಬಂಧಿತ ದಾಖಲೆಗಳನ್ನು ಪರಿಶೀಲನೆಗಾಗಿ ಸದಸ್ಯರಿಗೆ ವಿದ್ಯುನ್ಮಾನವಾಗಿ ಪ್ರವೇಶಿಸಬಹುದು. ಪ್ರವೇಶಕ್ಕಾಗಿ ವಿನಂತಿಗಳನ್ನು **cs@boxandboard.in** ಗೆ ಕಳುಹಿಸಬೇಕು, ಇದರಲ್ಲಿ ಸದಸ್ಯರ ಹೆಸರು, ಫೋಲಿಯೊ ಸಂಖ್ಯೆ/ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ, ಇ–ವೋಟಿಂಗ್ ಮೂಲಕ ಮತಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದವರೆಗೆ. ಇದಲ್ಲದೆ, ನಿರ್ದೇಶಕರ ಮಂಡಳಿಯು **M/s** ಅವರನ್ನು ನೇಮಿಸಿದೆ. ಶಿವಾನಿ ವಶಿಷ್ಠ & ಅಸೋಸಿಯೇಟ್ಸ್, ಕಂಪನಿ ಕಾರ್ಯದರ್ಶಿಗಳು (ಸದಸ್ಯತ್ವ ಸಂಖ್ಯೆ. **ACS- 55372; CP** ಸಂಖ್ಯೆ. 26693), ಇ–ವೋಟಿಂಗ್ ಕಾರ್ಯವಿಧಾನದ ಮೂಲಕ ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ಅಂಚೆ ಮತಪತ್ರ ಪ್ರಕ್ರಿಯೆಯನ್ನು ನಡೆಸಲು ಸ್ಕ್ರುಟೈಸರ್ ಆಗಿ. ಕಂಪನಿಯು ರಿಮೋಟ್ ಇ–ವೋಟಿಂಗ್‌ನ ಮುಕ್ತಾಯದಿಂದ 2 ಕೆಲಸದ ದಿನಗಳಲ್ಲಿ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ ಅಂಚೆ ಮತಪತ್ರದ ಮೂಲಕ ಮತದಾನದ ಫಲಿತಾಂಶಗಳನ್ನು ಪ್ರಕಟಿಸುತ್ತದೆ. ಈ ಫಲಿತಾಂಶಗಳು, ಸ್ಕ್ರೂಟಿನೈಜರ್‌ನ ವರದಿಯೊಂದಿಗೆ, ಕಂಪನಿಯ ವೆಬ್ ಸೈಟ್ **https://boxandboard.in/** ಮತ್ತು **CDSL** ವೆಬ್‌ಸೈಟ್ **https://www.evotingindia.com/noticeResults.jsp.** ನಲ್ಲಿ ತಿಳಿಸಲಾಗುತ್ತದೆ ಕಂಪನಿಯ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಂಜ್ಗಳು, ಅವುಗಳೆಂದರೆ **NSE BSE.**

B&B TRIPLEWALL CONTAINERS LIMITED ಪರವಾಗಿ
ಸಹಿ/–
ಮನೀಶ್ ಕುಮಾರ್ ಗುಪ್ತಾ
DIN:03568502
ವ್ಯವಸ್ಥಾಪಕ ನಿರ್ದೇಶಕ

ದಿನಾಂಕ : 11.06.2024
ಸ್ಥಳ: ಬೆಂಗಳೂರು